ವಾರದ ಪತ್ರ

## ಕುಡಿತದ ಹಾಡಿಗೆ ಬ್ರೇಕ್ ಹಾಕಿ

ಸರ್ಕಾರ ಮದ್ಯಪಾನ ಹಾಗೂ ಧೂಮಪಾನಗಳನ್ನು ತಡೆಗಟ್ಟಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ (ಬೀದಿ ನಾಟಕ) ತಿಳಿವಳಿಕೆ ಮೂಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇಂದು ಕೆಲವರು ಸಂಗೀತ ನಿರ್ದೇಶಕರು ಹಾಡುಗಳನ್ನು ವೈಭವೀಕರಿಸಿ ಚಲನಚಿತ್ರಗಳಲ್ಲಿ ತೋರಿಸುತ್ತಿದ್ದಾರೆ. ಹೊಸ ವರ್ಷದ ಆಚರಣೆಯಲ್ಲಿ ಗಾಯಕರು, ಗಾಯಕಿಯರು, ಕೈಯಲ್ಲಿ ಬಾಟಲಿಗಳನ್ನು ಹಿಡಿದು ಕುಣಿಯುತ್ತ ತೂರಾಡುತ್ತಾ ಕುಣಿತದ ಹಾಡುಗಳನ್ನು ಹಾಡುತ್ತಾರೆ. ಇದನ್ನು ನೋಡಿದ ಎಳೆಯ ಮಕ್ಕಳು ತಲೆ ತಗ್ಗಿಸುವಂತಾಗಿದೆ. ಚಲನಚಿತ್ರಗಳಲ್ಲಿ ನಟ– ನಟಿಯರು ಕುಡಿತದ ಹಾಡಿನಲ್ಲಿ ನಟಿಸುತ್ತಾ ಪ್ರೇಕ್ಷಕರನ್ನು ಮನಸೆಳೆಯಲು ಪ್ರಯತ್ನ ಮಾಡುತ್ತಾರೆ. ಕುಡಿತದ ಹಾಡುಗಳನ್ನು ನೋಡಿದ ಪ್ರೇಕ್ಷಕರು ಕುಡಿತದಲ್ಲಿ ಸಂತೋಷ ನೋವು ಮರೆಸುವ ಶಕ್ತಿ ಇದೆ ಎಂಬ ಭಾವನೆ ಮೂಡಿಸುತ್ತಿದ್ದಾರೆ. ಇದರಿಂದ ಸಮಾಜದ ಮೇಲೆ ಹಾಗೂ ಯುವಜನತೆ ಮೇಲೆ ಅಡ್ಡ ಪರಿಣಾಮ ಬೀರುತ್ತಿದೆ. ಇದರಿಂದ ಸಮಾಜದ ಆಸ್ತಿಪಾಸ್ತಿಗೂ ನಷ್ಟ ಆಗುತ್ತದೆ. ಆದ್ದರಿಂದ ಉನ್ಮಾದ ಮೂಡುವ ಕುಡಿತದ ಹಾಡಿಗೆ ಬ್ರೇಕ್ ಹಾಕಿ. ಇಂದಿನ ಯುವಜನತೆಯನ್ನು ಸನ್ಮಾರ್ಗದಲ್ಲಿ ಮೂಡಿಸುವ ಉತ್ತಮ ಗೀತೆಗಳು ರಚನೆಯಾಗಲಿ ಸಂಗೀತ ನಿರ್ದೇಶಕರು ಇತ್ತ ಗಮನ ಹರಿಸಿದರೆ ಉತ್ತಮ.

ಕೊನೆಯ ಪಕ್ಷ ಟೀವಿಗಳಲ್ಲಿ ಹಾಕಬೇಕಾದರೂ ಅಂತಹ ಸಿನಿಮಾದ ದೇಶ್ಯಗಳಿಗೆ ಕತ್ತರಿ ಹಾಕಲೇಬೇಕು. ಟಾಕೀಸಿನಲ್ಲಿ ಆದರೆ ಆಯಾ ಸಿನಿಮಾದ ಆಸಕ್ತರು ಮಾತ್ರ ಹೋಗುತ್ತಾರೆ. ಮನೆಯಲ್ಲಾದರೆ ಎಲ್ಲ ವಯೋಮಾನದವರೂ ನೋಡುತ್ತಾರೆ. ಈ ಕಾರಣಕ್ಕೆ ಅಂತಹ ಸನ್ನಿವೇಶ ಇಲ್ಲದೆ ಇದ್ದರೆ ಚೆಂದ. ಮೂಲತಃ ಅಂತಹ ಸನ್ನಿವೇಶವನ್ನೇ ತರದಿದ್ದರೆ ಇನ್ನೂ ಉತ್ತಮ.

—ಎಂ.ಎಸ್. ಉಷಾ ಪ್ರಕಾಶ್, ಬೆಂಗಳೂರು

## ಉತ್ತರ ಕರ್ನಾಟಕದ ಒಳ್ಳೆ ಕಥೆ

ಸಾಮಾನ್ಯ ವಾಗಿ ಸಿನಿಮಾ, ರಿಯಾಲಿಟಿ ಶೋ ಹಾಗು ಧಾರಾವಾಹಿಗಳಲ್ಲಿ ಉತ್ತರ ಕರ್ನಾಟಕದ ಜನರನ್ನು, ಅಲ್ಲಿಯ ಭಾಷೆಯನ್ನು ಹಾಗೂ ಅಲ್ಲಿನ ಸಂಪ್ರದಾಯವನ್ನು ಹಾಸ್ಯಾಸ್ಪದವಾಗಿ ತೋರಿಸುತ್ತಾರೆ. ಆದರೆ ಈಗ ಬರುತ್ತಿರುವ 'ಗಿಣಿರಾಮ'ದಲ್ಲಿ ಸ್ಥಳೀಯ ಕಲಾವಿದರ ಮೂಲಕ ಅಲ್ಲಿನ ಕನ್ನಡ ಸೊಗಡನ್ನು ದ್ವಂದ್ವಾರ್ಥ ಇಲ್ಲದೆ ಚಂದದ ಸಂಭಾಷಣೆ ರೂಪಿಸಿದ್ದಾರೆ. ಕ್ಯಾಮರಾದ ಕಣ್ಣಿಂದ ಅಲ್ಲಿನ ಹಳ್ಳಿಗಳ ಸೊಬಗನ್ನು ಬಹಳ ಸೊಗಸಾಗಿ ಸೆರೆಹಿಡಿದಿದ್ದಾರೆ. ಆಯಿ ಸಾಹೇಬ್, ಶಿವರಾಮ್ ತಂದೆ ಹಾಗು ವಿನಾಯಕ ಮಾಸ್ತರ ನಟನೆ ಅದ್ಭುತವಾಗಿ ಮೂಡಿಬರುತ್ತಿದೆ. ಮಹತಿ ಮನೆಯವರ ಬೆಂಗಳೂರಿನ ಭಾಷೆ ಹಾಗೂ ಮಿಕ್ಕೆಲ್ಲರ ಉತ್ತರ ಕರ್ನಾಟಕದ ಸಂಭಾಷಣೆಕೇಳಲು ಖುಷಿಯಾಗುತ್ತದೆ. ಒಟ್ಟಿನಲ್ಲಿ ಒಂದು ಉತ್ತಮ ವಿಭಿನ್ನವಾದ ಧಾರಾವಾಹಿ.

—ಟಿ.ಎಸ್. ಜಯಂತಿ ಶಾಸ್ತ್ರೀ, ಮೈಸೂರು

## ಹೂ ಮಳೆಯಲ್ಲಿ ರಾಕ್ಷಸಿ

ತ್ರೇತಾಯುಗದಲ್ಲಿ ರಾಕ್ಷಸರಿದ್ದರು.
ರಾಕ್ಷಸಿಯರೂ ಇದ್ದರು!
ಕಲಿಯುಗದಲ್ಲಿಯೂ ರಾಕ್ಷಸಿಯರಿರಲು ಸಾಧ್ಯವೇ?
ಹೌದು!

'ಹೂ ಮಳೆ' ಎಂಬ ಧಾರಾವಾಹಿಯ ಖಳನಾಯಕಿ ಕಾರ್ಪೊರೇಟರ್ ಪಾತ್ರವು ರಾಕ್ಷಸಿಗಿಂತಲೂ ಅಸಹ್ಯವಾಗಿದೆ. ಅರಚುವುದನ್ನೇ ನಟನೆ ಎಂದು ಭಾವಿಸಿದರೆ ಇಂತಹ ವಿಕೃತ ಪಾತ್ರಗಳು ಸೃಷ್ಟಿಯಾಗುತ್ತವೆ. ಮಜಾ ಟಾಕೀಸ್ ಕಾರ್ಯಕ್ರಮದಲ್ಲಿ ಇಂಪಾಗಿ ಹಾಡುವ 'ರೆಮೋ' ಅವರನ್ನು 'ನಾಯ್ಸ್ ಪೊಲ್ಯೂಷನ್' ಎಂದು ಸಂಬೋಧಿಸುತ್ತಾರೆ ಸೃಜನ್!

ವಿಪರ್ಯಾಸವೆಂದರೆ ಹೂ ಮಳೆಯ ಮಹಿಳಾ ಕಾರ್ಪೊರೇಟರ್ ಪಾತ್ರಧಾರಿಯೇ ನಿಜವಾದ ನಾಯ್ಸ್ ಪೊಲ್ಯೂಷನ್!

—ಪಿ.ಜೆ. ರಾಘವೇಂದ್ರ, ಮೈಸೂರು

## ತಾಯಿ ಹೆಸರಿಗೆ ಕಳಂಕ

ಪ್ರಪಂಚದಲ್ಲಿ ತಾಯಿ ಎಂದರೆ ಅದಕ್ಕೊಂದು ಭಾವ ಮಿಡಿತ, ಕರುಳ ಸಂಬಂಧ ಬೆಸೆದುಕೊಳ್ಳುತ್ತದೆ. ಈ ಕಾರಣಕ್ಕಾಗಿ ಅದಕ್ಕೆ ವಿಶೇಷ ಅರ್ಥ ಕೊಟ್ಟು ನಮ್ಮ ಪರಂಪರೆಯಲ್ಲಿ ಗುರುತಿಸಿದ್ದೇವೆ. ತಾಯಿ ಬಾಂಧವ್ಯದ ಮುಂದೆ ಯಾವುದು ಇಲ್ಲ ಎಂಬುದು ಎಲ್ಲರೂ ತಿಳಿದಿರುವ ಸತ್ಯ. ಅಂತಹ ತಾಯಿ ಪದಕ್ಕೆ ಮಸಿ ಬಳಿಯುವ ಕೆಲಸವನ್ನು 'ರೇಡಿಯೋ ಜಾಕಿ' ಸುಜಾತಾ ಪಾತ್ರ ಮಾಡುತ್ತಿದೆ ತಾನು ಹೆಣ್ಣು ಎನ್ನುವುದನ್ನು ಮರೆತು ತಾನು ಹೆತ್ತ ಮಗಳ ಭ್ರೂಣ ಹತ್ಯೆ ಮಾಡಿಸಲು ಆ ಪಾತ್ರ ಮುಂದಾಗಿದೆ. ತಾಯಿಯೊಬ್ಬಳು ಮೊತ್ತೊಬ್ಬಳ ತಾಯ್ತನವನ್ನು ಕಿತ್ತುಕೊಳ್ಳುವುದು ಅಮಾನವೀಯ ಎಂದು ಅನ್ನಿಸುತ್ತದೆ

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಈ ಹಿಂಸೆಯ ತಾಳೆವು

'ನಮ್ಮ ಮನೆ ಯವರಾಣಿ'ಯಲ್ಲಿ ಅನಿಕೇತ್ ಮತ್ತು 'ಮಂಗಳಗೌರಿ ಮದುವೆ'ಯಲ್ಲಿ ಮಂಗಳಗೌರಿ ಪಾತ್ರದವರು ಕನ್ನಡ ಭಾಷೆಗೆ ನೀಡುವ ಚಿತ್ರ ಹಿಂಸೆ ತಾಳಲಾರದಾಗಿದೆ. ವೀಕ್ಷಕರಿಗೆ ಇದು ಕರ್ಣ ಕಠೋರವಾಗುತ್ತದೆ. ಇವರಿಬ್ಬರಿಗೂ 'ಹ'ಕಾರ ಮತ್ತು 'ಅ' ಕಾರವನ್ನು ಹೇಗೆ ಬಳಸಬೇಕು ಮತ್ತು ಎಲ್ಲಿ ಬಳಸಬೇಕು ಎನ್ನುವ ಪರಿಜ್ಞಾನ ಇದ್ದಂತೆ ಕಾಣುವುದಿಲ್ಲ. ನಿರ್ದೇಶಕರು ಭಾಷಾ ಶುದ್ಧತೆಗೆ ಮಹತ್ವ ನೀಡಬೇಕಾಗಿದೆ. ಇದರಲ್ಲಿ ಪಾತ್ರಧಾರಿಗಳಿಗಿಂತ ನಿರ್ದೇಶಕರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಒಂದು ಧಾರಾವಾಹಿಯ ಜನಪ್ರಿಯತೆ ಮತ್ತು ಯಶಸ್ಸು ಕೇವಲ ಕತೆ, ಸಂಭಾಷಣೆ ಮತ್ತು ಅದನ್ನು ಸಾಗಿಸುವ ಪರಿಯ ಮೇಲೆ ಮಾತ್ರ ಅವಲಂಬಿತವಾಗಿರದೇ, ಬಳಸುವ ಭಾಷೆ ಮತ್ತು ಉಚ್ಚರಣೆ ಮೇಲೂ ಇರುತ್ತದೆ. ಭಾಷೆಯ ಸೊಗಡು ಇರುವುದು ಇದರ ಅಲ್ಪ ಪ್ರಾಣ, ಮಹಾ ಪ್ರಾಣ, ಹ ಕಾರ, ಅ ಕಾರ ಬಳಸುವಿಕೆ ಮತ್ತು ಒತ್ತಕ್ಷರಗಳಲ್ಲಿ. ಇವುಗಳ ಬಳಕೆಯಲ್ಲಿ ಸ್ವಲ್ಪ ಚ್ಯುತಿಯಾದರೂ, ಭಾಷೆಯ ಸೊಬಗು ಕ್ಷೀಣಿಸುತ್ತದೆ. 'ಕನ್ನಡತಿ' ಧಾರಾವಾಹಿ ಇದಕ್ಕೊಂದು ಉದಾಹರಣೆ ಎನ್ನಬಹುದು.

—ರಮಾನಂದ ಶರ್ಮಾ, ನವ ದೆಹಲಿ

## ಶ್ರೀಮಂತಿಕೆಯ ಅಹಂ



ಕಲರ್ಸ್ ಕನ್ನಡದ 'ಹೂ ಮಳೆ'ಯಲ್ಲಿ 'ಕಾರ್ಪೊರೇಟ್ ಕಾವೇರಿ' ಎಂಬ ಪಾತ್ರ ಇದೆ. ಅದರ ಅಬ್ಬರ ಮಿತಿಮೀರಿದೆ. ಯಾವುದೇ ಶ್ರೀಮಂತರಿಗೂ ಇಲ್ಲದಷ್ಟು 'ಪೊಗರು' ಇದಕ್ಕೆ ಅನ್ವಯಿಸಲಾಗಿದೆ. ಮುಕುಂದನ ಕೊಲೆಗೆ ಸಬಂಧಿಸಿದಂತೆ ಮಿನಿಸ್ಟರ್ ಯದುವೀರ್ ತನಿಖೆ ಮಾಡಲು ಉತ್ತಮ ಅಧಿಕಾರಿಯನ್ನೇ ನೇಮಿಸಿದ್ದಾರೆ.

ಕಾರ್ಪೊರೇಟ್ ಕಾವೇರಿಯ ಶ್ರೀಮಂತಿಕೆಯಅಹಂಕಾರ ಹೆಚ್ಚಾಯಿತು ಎಂದೆನಿಸುತ್ತದೆ.

—ಚಂದ್ರಶೇಖರ್, ಬೆಂಗಳೂರು.